# Views on Venkatram ...Mr. CM Ibrahim

## ಶ್ರೀ ವೆಂಕಟ್‌ರಾಂ ಅವರ ಬಗ್ಗೆ ಶ್ರೀ ಸಿ.ಎಂ. ಇಬ್ರಾಹಿಂ ಅವರ ಕೆಲವು ಮಾತುಗಳು

ವೆಂಕಟ್‌ರಾಂ ಅವರಲ್ಲಿ ಒಂದೇನು ನೋಡ್ತಿದ್ದು ಅಂತ ಹೇಳಿದ್ರೆ convince ಮಾಡ್ತಕ್ಕಂತ capacity ಇತ್ತು ಅವರಿಗೆ. ಯಾರಿಗಾದ್ರೂ ಪರಿವರ್ತನೆ ಮಾಡಬೇಕು ಅಂತ ಹೇಳಿದ್ರೆ, ಬಿಡ್ತಿರಿಲಿಲ್ಲ. ಬೆಳಿಗ್ಗೆ, ಸಾಯಂಕಾಲ ಮಧ್ಯಾಹ್ನ ಹೇಳಿ ಹೇಳಿ ಹೇಳಿ ಹೇಳಿ ಹೇಳಿ ಹೇಳಿ ಹೇಳಿ ಪರಿವರ್ತನೆ ಮಾಡೋರು. ಎಷ್ಟೋ ತಿರುಗಿ ಪ್ರಶ್ನೆ ಕೇಳಿದ್ರೂ ಕೂಡ ಅವರಿಗೆ ಸಿಟ್ ಬರ್ತಿರ್ಲಿಲ್ಲ. ನಾವೇನಾದ್ರೂ ಒಂದ್ ಚೇಷ್ಟೆ ಮಾಡ್ತುಲೇ ಇದ್ವಿ. ಅಯ್ಯೋ ತೆಗೀರಿ ಸ್ವಾಮಿ ನೀವೆಲ್ಲ ಜೈಲಿಗ್  ವಾಲಂಟರಿಯಾಗಿ ಎಷ್ಟ್ ಜನ ಬಂದವ್ರೆ; ಬಲವಂತವಾಗಿ ಇಡ್ಕೊಂಡ್ ಬಂದವ್ರೆ ಅವರಿದ್ದಾಗೆ. ಇಂದಿರಾಗಾಂಧಿ ಏನಾದ್ರೂ ಇನ್ನೊಂದ್ ಸ್ವಲ್ಪ ದಿವಸ ಎಮರ್ಜೆನ್ಸಿ ಇಟ್ಟಿಟ್ರೆ ಕೆಲವರು ವಾಲೆಂಟಿಯರಾಗಿ ಬರೆದುಕೊಟ್ ಹೋಗ್ತಿದ್ರು ಅಂತ್ ಹೇಳುದ್ರೂ ಕೂಡ, ಅವರಿಗೆ ಸಿಟ್ ಬರದು ರೀ. ಹಂಗಲ್ಲ ಓದ್ಬಿಟ್ಟು ಸೀನಿದೆ ಅಂತ ಹೇಳಿದ್ರೆ ಕೆಲವು ಯುವಕರೆಲ್ಲ ಯುವಕರೇನು ಹಿರಿಯರೇ ಆಸೆ ಬಿಟ್ಟುಬಿಟ್ಟಿದ್ರು. ನಾವು ರಿಲೀಸ್ ಆಗ್ತೀವಿ ಅಂತ ಅನೇಕ ಜನರಿಗೆ ಆಸೇನೆ ಇರ್ಲಿಲ್ಲ. ಅಂಥವರಿಗೆ ಆ ಜೈಲೊಳಗೆ ಸ್ಥೈರ್ಯ ಕೊಡ್ತಕ್ಕಂಥದ್ದು, ಯಾಕೆ ಅಂತ ಹೇಳಿದ್ರೆ ಅದರ ಒಳಗೆ ಇದ್ದವರಿಗೆ ಗೊತ್ತು ಅದು ಏನು ಅಂತ ಹೇಳಿ ಅದರ ಹೊರಗಿದ್ದವರಿಗೆ ಗೊತ್ತಿರ್ಲಿಲ್ಲ. ಒಳಗ್ ಹೋದದ್ದ್ ಅಷ್ಟೇ ಹೊರ್ತು ಹೊರಗ್ ಯಾವಾಗ ಬರ್ತೀನಿ ಹೊರಗಡೆ ಸುದ್ದಿ ಏನು ಅದು ವಾರಕ್ ಒಂದ್ ಸಲ ಜೈಲ್ ಡಾಕ್ಟ್ರುಗೇನಾದ್ರೂ ಆಸ್ಪತ್ರೆಗೆ ಅವನಿಗೆ ಅಮ್ಮಾ ದಪ್ಪಯ್ಯಾ ಅಂತ ಹೇಳಿ ಕೈ ಮುಗ್ದು ಹೊರಗ್ ಬಂದ್ರೆ ಆ ಆಸ್ಪತ್ರೆ ಗಾಳಿ ಮತ್ತು ಪೋಲೀಸ್ ವ್ಯಾನು ಇದರ ಬ್ಯಾಲೆನ್ಸ್ ಸಿಗುತ್ತೆ ಹೊರ್ತು ಆ ಆಪ್ತರೂ ಕೂಡ ಹತ್ರ ಬಂದು ನಿಂತು ಪರಿಸ್ಥಿತಿ

ಏನು ಅಂತ ಹೇಳಿ ಕೇಳೋ ಅಂತ ಪರಿಸ್ಥಿತಿ ಅವತ್ತು ದೇಷದಲ್ಲಿ ಇರ್ಲಿಲ್ಲ...
ಅವ್ರಿಗಿದ್ದಂಥ ದೊಡ್ಡ ಗುಣ ಏನೂಂತಂದ್ರೆ ಸಿಟ್ ಬಂದ್ರೆ ಏ ಬಾಯಿಲ್ಲಿ ಅಂತ ಹೇಳಿ ಶ್ರೀಮಾನ್ ಸಿಂಧ್ಯಾ, ಸುರೇಶು, ನಾನು ಅವ್ರು ಒಂದೊಂದ್ ಗಂಟೆ ಎರಡೆರಡ್ ಗಂಟೆ...... ಅವ್ರಿಗೆ ಜ್ಞಾನದ ಒಂದು ಭಂಡಾರ ಇತ್ತು. ಅದ್ಯಾವಾಗ್ ಓದ್ತಿದ್ರೋ ಅದು ಹ್ಯಾಗ್ ಅದನ್ನ ಸಂಗ್ರಹಿಸ್ತಿದ್ರೊ ದೇವ್ರಿಗೆ ವಿಧ್ವತ್ತಾದಂತ ಒಂದು ಶಕ್ತಿಯನ್ನ ಅವ್ರಿಗೆ ಕೊಟ್ಟಿದ್ದಾರೆ...